**ಗುಂಡ:** ಲೇ ಮಂಗ್ಯಾ. ನೀನು ಯಾವ ಟೀಂ?
**ಮಂಗ್ಯಾ:** ಲೋ ನಾನು ಪಕ್ಕಾ ಆರ್‌ಸಿಬಿ ಅಭಿಮಾನಿ. ಹೆಂಡತಿ ಪಕ್ಕದಲ್ಲಿದ್ದಾಗ ಪ್ರೀತಿ ಟೀಂ ಅಭಿಮಾನಿ! ಯಾಕಂದ್ರೆ ಅವ್ಳು ಪಂಜಾಬಿ!

***

**ಟೀಚರ್:** ಮರಿಗುಂಡ, ನೀನು ಹುಟ್ಟಿದ ದಿನ ಯಾವ್ದೋ?
**ಮರಿಗುಂಡ:** ಅಕ್ಟೋಬರ್ 12 ಮಿಸ್.
**ಟೀಚರ್:** ಯಾವ ವರ್ಷ?
**ಮರಿಗುಂಡ:** ಅಯ್ಯೊ, ಎಂಥ ಪ್ರಶ್ನೆ ಕೇಳ್ತೀರಾ. ಪ್ರತಿ ವರ್ಷ!

***



ಶಾಸಕನಾಗುವ ಮುಂಚೆ ಜೈಲಿಗೆ ಓಡಾಡಿಕೊಂಡಿದ್ದೆ. ಶಾಸಕನಾದ ಮೇಲೆ ವಿಧಾನಸೌಧಕ್ಕೆ ಓಡಾಡಿಕೊಂಡಿದ್ದೀನಿ.

**ಗುಂಡ:** ಆ ಪೆದ್ದ ಕರಿಯನನ್ನು ಹೇಗಾದರೂ ಮಾಡಿ ನಗಿಸಬೇಕಲ್ಲ.
**ತಿಮ್ಮ:** ಒಂದು ಒಳ್ಳೆ ಐಡಿಯಾ ಐತೆ ಕಣ್ಲಾ..
**ಗುಂಡ:** ಏನದು?
**ತಿಮ್ಮ:** ನಗು ಬರುವ ಜೋಕಿಗೆಲ್ಲ ಅವ್ನು ನಗಲ್ಲ. ಬುಧವಾರ ಒಂದು ಕೆಟ್ಟ ಜೋಕ್ ಹೇಳಿದ್ರೆ ಶನಿವಾರ ನಗ್ತಾನೆ ನೋಡು!

***

ದಸರಾ ಹಬ್ಬದ ಸಲುವಾಗಿ ಗುಂಡ ಕುಟುಂಬ ಸಮೇತ ಟೀವಿ ಖರೀದಿಸಲು ಶೋರೂಂಗೆ ಹೋಗಿದ್ದಾಗ ನಡೆದದ್ದು.
**ಗುಂಡ:** ನಿಮ್ಮಲ್ಲಿ ಕಲರ್ ಟಿವಿ ಇದೆಯಾ?
**ಸೇಲ್ಸ್ ಮ್ಯಾನ್:** ಇದೆ ಸಾರ್.
**ಗುಂಡ:** ಹಾಗಾದ್ರೆ ಹಳದಿ ಕಲರ್ ಟೀವಿ ಕೊಡಿ ಪ್ಲೀಸ್.

***

**ಟೀಚರ್:** ನಿನ್ನ ಬೆಸ್ಟ್ ಫ್ರೆಂಡ್ ಹೆಸರನ್ನು ಇಂಗ್ಲಿಷ್‌ನಲ್ಲಿ ಹೇಳು.
**ಮರಿಗುಂಡ:** ಬ್ಯೂಟಿಫುಲ್ ರೆಡ್ ಅಂಡರ್‌ವೇರ್ (Beautiful Red Underwear)
**ಟೀಚರ್:** ಹಾಗಂದ್ರೆ ಏನು?
**ಮರಿಗುಂಡ:** ಅದೇ ಮಿಸ್ ಅವನ ಹೆಸರು ಸುಂದರ್ ಲಾಲ್ ಚಡ್ಡಿ.

***

**ಪಶ್ನೆ:** 'ರಾಮನು ಮರದಿಂದ ಕೆಳಗೆ ಬಿದ್ದನು' – ಇದು ಯಾವ ಕಾಲ?
**ಗುಂಡ:** ರಾಮನಿಗೆ ಕೆಟ್ಟಕಾಲ!

***

**ಪ್ರಶ್ನೆ:** ಅಕ್ಬರನು ಸಿಂಹಾಸನ ಏರಿದ ತಕ್ಷಣ ಏನು ಮಾಡಿದ?
**ಗುಂಡ:** ಕುಳಿತುಕೊಂಡನು.

***

**ಪ್ರಶ್ನೆ:** ವಾಸ್ಕೋಡಗಾಮ ಭಾರತದಲ್ಲಿ ಮೊದಲ ಹೆಜ್ಜೆ ಇಟ್ಟ ತಕ್ಷಣ ಏನು ಮಾಡಿದ?
**ಗುಂಡ:** ಎರಡನೇ ಹೆಜ್ಜೆ ಇಟ್ಟನು.

***

**ಸುಬ್ಬ:** ಸತ್ಯ ಹರಿಶ್ಚಂದ್ರನ ಕಥೆಯಿಂದ ತಿಳಿಯಬೇಕಾದ ನೀತಿ ಏನು?
**ಗುಂಡ:** ಕಷ್ಟ ಬಂದಾಗ ಹೆಂಡತಿ–ಮಕ್ಕಳನ್ನು ಮಾರಬಹುದು!

***

**ರಮ್ಯಾ:** ರೀ, ರಾತ್ರಿ ರಾಮಾಯಣ ಸಿನಿಮಾ ನೋಡಿದ್ರಲ್ವಾ. ಅದ್ರಿಂದ ತಿಳಿದ ನೀತಿ ಏನು?
**ಮಂಜ:** ಹೆಂಡತಿಗೆ ಮಾತು ಕೊಡಬಾರದು. ಕೊಟ್ಟರೂ ಅದನ್ನು ವರ್ಷಗಳ ಕಾಲ ಕಾದಿಡಬಾರದು.

***

**ಮಂಡ:** ಗಣಪತಿಯ ಕತೆಯಿಂದ ತಿಳಿದದ್ದು?
**ಗುಂಡ:** ಸ್ನಾನದ ಕೋಣೆಗೆ ಬಾಗಿಲು ಅತ್ಯವಶ್ಯಕ.

***

**ಟೀಚರ್:** 'ಗಂಡಾಂತರಕಾರಿ ಕೆಲಸ'. ಈ ಪದವನ್ನು ಇಂಗ್ಲಿಷ್‌ಗೆ ಅನುವಾದಿಸು.
**ಗುಂಡ:** ಹಸ್ಬೆಂಡ್ ವೆಜಿಟೇಬಲ್ ವರ್ಕ್. (Husband vegetable work)

***

**ಶಿಕ್ಷಕ:** ದ್ರೌಪದಿ ವಸ್ತ್ರಾಪಹರಣ ಮಾಡಿದವರು ಯಾರು?
**ಗುಂಡ:** ಕನ್ನಡ ಪಂಡಿತರು (ಕನ್ನಡ ಕ್ಲಾಸ್ ಟೀಚರ್)

–(ಸಂಗ್ರಹ) ಆರ್. ಮನೋಜ್, ಕೋಲಾರ

SANDHILIN सन्धिलिन
ಸಂಧಿಲಿನ್
ಸಂಧಿಲಿನ್ ಹಚ್ಚಿ
ನೋವಿಗೆ ವಿದಾಯ ಹೇಳಿ!
ಶೀಘ್ರ ಪರಿಣಾಮಕಾರಿ


- ವಿವಿಧ ತರಹದ ನೋವಿಗೆ ಶೀಘ್ರ ಪರಿಣಾಮಕಾರಿ.
- ಕಳೆದ 14 ವರ್ಷಗಳಿಂದ ಲಕ್ಷಾಂತರ ಜನರ ಪ್ರಥಮ ಆಯ್ಕೆ.
- 'ಸಂಧಿಲಿನ್' ಲಿನಿಮೆಂಟ್‌ನ್ನು ಆಯುರ್ವೇದದ ಋಷಿಮುನಿ ಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು
SDM AYURVEDA PHARMACY
ISO / GMP CERTIFIED
ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com
ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ